# ಬಾನು ಮುಷ್ತಾಕ್ ಅವರ ಕಥೆಗಳಲ್ಲಿ ಮಹಿಳಾ ಸಂವೇದನೆ

**ಸೌಜನ್ಯ ಎಸ್.ಕೆ.**

ಕನ್ನಡ ಸಹಾಯಕ ಪ್ರಾಧ್ಯಾಪಕರು, ಕೇಂಬ್ರಿಡ್ಜ್ ಕಾಲೇಜು, ಕೆ.ಆರ್. ಪುರಂ, ಬೆಂಗಳೂರು.

**DOI: https://doi.org/10.5281/zenodo.18699981**

## ABSTRACT:

ಬಾನು ಮುಷ್ತಾಕ್ ಅವರ ಸಾಹಿತ್ಯವು ಮುಸ್ಲಿಂ ಮಹಿಳೆಯರ ಅಂತರಾಳದ ದನಿ ಮತ್ತು ಸಾಮಾಜಿಕ ಸಂಘರ್ಷಗಳ ಪ್ರಬಲ ಅಭಿವ್ಯಕ್ತಿಯಾಗಿದೆ. ಪಿತೃಪ್ರಧಾನ ವ್ಯವಸ್ಥೆ, ಧಾರ್ಮಿಕ ಕಟ್ಟುಪಾಡುಗಳು ಮತ್ತು ಬಹುಪತ್ನಿತ್ವದಂತಹ ಅನಿಷ್ಟ ಪದ್ಧತಿಗಳ ನಡುವೆ ನಲುಗುವ ಸ್ತ್ರೀ ಬದುಕನ್ನು ಇವರ ಕಥೆಗಳು ಮಾರ್ಮಿಕವಾಗಿ ಚಿತ್ರಿಸುತ್ತವೆ. 'ಒಮ್ಮೆ ಹೆಣ್ಣಾಗು ಪ್ರಭುವೆ', 'ಎದೆಯ ಹಣತೆ' ಮತ್ತು 'ಬೆಂಕಿಮಳೆ'ಯಂತಹ ಕಥೆಗಳ ಮೂಲಕ ಸ್ತ್ರೀಯರ ಅಸಹಾಯಕತೆ, ಬಡತನ ಮತ್ತು ಅಸ್ತಿತ್ವದ ಹೋರಾಟವನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಧರ್ಮ ಮತ್ತು ಪರಂಪರೆಯ ಹೆಸರಿನಲ್ಲಿ ನಡೆಯುವ ಶೋಷಣೆಯನ್ನು ಪ್ರಶ್ನಿಸುವ ಲೇಖಕಿಯ ದಿಟ್ಟ ನಿಲುವುಗಳು ಇಲ್ಲಿ ವ್ಯಕ್ತವಾಗಿವೆ. ಕೇವಲ ಕೌಟುಂಬಿಕ ಚಿತ್ರಣಕ್ಕೆ ಸೀಮಿತವಾಗದೆ, ಹೆಣ್ಣಿನ ಆತ್ಮಗೌರವ, ಪ್ರತಿರೋಧ ಮತ್ತು ಸಾಂವಿಧಾನಿಕ ಹಕ್ಕುಗಳ ಕುರಿತಾದ ಎಚ್ಚರವನ್ನು ಮೂಡಿಸುವಲ್ಲಿ ಬಾನು ಮುಷ್ತಾಕ್ ಅವರ ಕಥಾ ಸಾಹಿತ್ಯದ ಮಹತ್ವವನ್ನು ಗುರುತಿಸಲಾಗಿದೆ.

## KEYWORDS:

ಬಾನು ಮುಷ್ತಾಕ್, ಮಹಿಳಾ ಸಂವೇದನೆ, ಪಿತೃಪ್ರಧಾನ ವ್ಯವಸ್ಥೆ, ಮುಸ್ಲಿಂ ಮಹಿಳಾ ಸಾಹಿತ್ಯ, ಸಾಮಾಜಿಕ ಪ್ರತಿರೋಧ.

ಬಾನು ಮುಷ್ತಾಕ್ ಇದು ಕೇವಲ ಹೆಸರಲ್ಲ, ಒಂದು ಶಕ್ತಿ. ಸಾಮಾಜಿಕ ಬಹಿಷ್ಕಾರದಂತಹ ಕಠಿಣ ಸವಾಲುಗಳನ್ನೂ ಮೆಟ್ಟಿ ನಿಂತು ಸಾಧನೆಗೈದ ಅಪ್ರತಿಮ ಸಾಹಸಿ. ನಿರ್ಭೀತ ನಿಲುವುಗಳಿಗೆ ಹೆಸರಾದವರು. ಜ್ಞಾನವಂತೆ, ನ್ಯಾಯವಾದಿ, ಪತ್ರಕರ್ತೆ, ಹೋರಾಟಗಾರ್ತಿ, ಸಾಹಿತಿಯಾದ ಇವರಿಗೆ ಬೂಕರ್ ಪ್ರಶಸ್ತಿ ದೊರಕಿರುವುದು ಅತ್ಯಂತ ಸಂತಸದ ವಿಷಯವಾಗಿದೆ. ಮಹಿಳೆಯರ ಹಕ್ಕುಗಳಿಗಾಗಿ ಶ್ರಮಿಸುತ್ತಿದ್ದ ಬಾನು ಮುಷ್ತಾಕ್ ಅವರ ಮೇಲೆ 2000ರಲ್ಲಿ ಮತಾಂಧ ಮುಲ್ಲಾಗಳು ಸಾಮಾಜಿಕವಾಗಿ ಬಹಿಷ್ಕರಿಸಿ ಫತ್ವಾ ಹೊರಡಿಸಿದ್ದಾರೆ. "ಮಸೀದಿಗೆ ತೆರಳಿ ಪ್ರಾರ್ಥನೆ ಸಲ್ಲಿಸಲು ಮಹಿಳೆಯರಿಗೂ ಅವಕಾಶ ಕೊಡಬೇಕು. ಕುರಾನಿನಲ್ಲಿ ಮಸೀದಿಗೆ ಮಹಿಳೆಯರ ಪ್ರವೇಶವನ್ನು ನಿರಾಕರಿಸಿಲ್ಲ" ಎಂದು ಹೇಳಿದ ಮಾತ್ರಕ್ಕೆ ಅವರ ಮೇಲೆ ಬಹಿಷ್ಕಾರವನ್ನು ಹೇರಲಾಯಿತು. ಇಂತಹ ಏಕಪಕ್ಷೀಯವಾದ ಫತ್ವಾಗಳನ್ನು ಹೊರಡಿಸುವ ಮೂಲಕ ಅವರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದಮನ ಮಾಡುವ ನೀಚ ಕೃತ್ಯಕ್ಕೆ ಇಳಿದರು ಮತಾಂಧ ಮುಲ್ಲಾಗಳು. ಇವರ ಪ್ರಕಾರ ಹೆಣ್ಣು ಯಾವಾಗಲೂ ಪರಾವಲಂಬಿಯಾಗಿರಬೇಕು. ಅದಕ್ಕಾಗಿ ಮಹಿಳೆಯರನ್ನು ಹೆದರಿಸಿ ಮೂಲೆಗುಂಪು ಮಾಡಲು ಹವಣಿಸುತ್ತಿರುತ್ತಾರೆ. ಇಂಥ ಹವಣಿಕೆಯ ವಿರುದ್ಧ ನಿಂತವರು ಬಾನು ಮುಷ್ತಾಕ್ ಅವರು.

ಬಾನು ಮುಷ್ತಾಕ್ ಅವರ ಕಥೆಗಳಲ್ಲಿ ಸ್ತ್ರೀ ಪಾತ್ರಗಳಿಗಿಂತ ಹೆಣ್ಣಿನ ಸಂವೇದನೆ ಬಹಳ ಮುಖ್ಯವಾಗಿದೆ. ಅವರು ತಮ್ಮ ಕಥೆಗಳಲ್ಲಿ ಹೆಣ್ಣಿನ ಸಹನೆಯ ಹಿಂದೆ ಇರುವ ದಾರುಣತೆಯ,

ಶೋಷಣೆಯ ಹಲವು ಮುಖಗಳ ಅನಾವರಣ ಮಾಡುತ್ತಾರೆ. ಜಾತ್ಯತೀತ ಮೌಲ್ಯಗಳನ್ನು ಮೈಗೂಡಿಸಿಕೊಂಡು ತಮ್ಮ ಬರಹದ ಮೂಲಕ ಸಮಾಜದ ನಿತ್ಯ ಸತ್ಯ ವಿದ್ಯಮಾನಗಳನ್ನು ಸೊಗಸಾಗಿ, ಹೃದಯಸ್ಪರ್ಶಿಯಾಗಿ ಅನಾವರಣಗೊಳಿಸಿದ ಬಾನು ಮುಷ್ತಾಕ್ ಅವರು ಹೆಣ್ಣು ಹೋರಾಟದ ದನಿಯಾಗಿ ಕಾಣುತ್ತಾರೆ.

ಬಾನು ಮುಷ್ತಾಕ್ ಅವರ 'ಒಮ್ಮೆ ಹೆಣ್ಣಾಗು ಪ್ರಭುವೆ' ಎಂಬ ಕತೆಯಲ್ಲಿ ಕಾಯಿಲೆಯಿಂದ ಆಸ್ಪತ್ರೆ ಸೇರಿದ ಕಥಾನಾಯಕಿ "ಎರಡನೆಯ ಮದುವೆ ಈಗ ಯಾಕೆ?" ಎಂದು ಗಂಡನನ್ನು ಕೇಳುತ್ತಾಳೆ. ಆಗ ಗಂಡ "ಇನ್ನು ಕೇಳಬೇಕೇನು? ನಿನ್ನಿಂದ ನನಗೆ ಯಾವ ಸುಖ ಸಿಕ್ಕಿದೆ... ಮುಟ್ಟಿದಾಗಲೆಲ್ಲ ಹೆಣದಂತೆ ಬಿದ್ದುಕೊಂಡಿರ್ತಿದ್ದೆಯಲ್ಲ. ಅದಕ್ಕೆ ಇನ್ನೊಂದು ಮದುವೆಯಾಗ್ತಿರೋದು" ಎಂದು ಹಾಸಿಗೆಯಿಂದ ಏಳಲು ಸಾಧ್ಯವಾಗದ ಬಾಣಂತಿ ಹೆಂಡತಿಯ ಮುಂದೆ ಇಂತಹ ಅಮಾನವೀಯ ಮಾತುಗಳನ್ನು ನುಡಿಯುತ್ತಾನೆ. ನೋವನ್ನು ಸಹಿಸಲಾರದ ನಾಯಕಿ "ಷರೀಯತ್ ನಿಯಮ ನಿರ್ಮಿಸಿದ ದೇವರು ಸಹ ಗಂಡಸು; ಈ ಸಮಾಜ ಕೂಡ ಪುರುಷ ಪ್ರಧಾನವಾಗಿದ್ದು, ಬಹು ಪತ್ನಿತ್ವದ ಹೆಸರಿನಲ್ಲಿ ಸ್ತ್ರೀಯರನ್ನು ಶೋಷಿಸುತ್ತಿದೆ. ಹಾಗಾಗಿ ಒಮ್ಮೆ ಹೆಣ್ಣಾಗು ಪ್ರಭುವೇ" ಎಂದು ಬೇಡಿಕೊಳ್ಳುತ್ತಾಳೆ. ಹೆಣ್ಣಾದರೆ ಆಕೆಯ ಅಳಲು ದೇವರಿಗೆ ತಿಳಿಯುತ್ತದೆ ಎಂಬುದು ಆಕೆಯ ಧ್ವನಿಯಲ್ಲಿನ ಅರ್ಥವಾಗಿದೆ.

'ಎದೆಯ ಹಣತೆ'ಯ ಕಥಾ ಹಂದರ ಹೆಣ್ಣೊಬ್ಬಳ ಛಿದ್ರವಾದ ಸಾಂಸಾರಿಕ ಕನಸು, ಅದರ ಬಗ್ಗೆ ಯಾವ ಸಹಾನುಭೂತಿಯೂ ಇಲ್ಲದ ಗಂಡು ಲೋಕ ಹಾಗೂ ಅಸಹಾಯಕ ಹೆಣ್ಣುಗಳ ಸ್ಥಿತಿಗತಿಯನ್ನು ಚಿತ್ರಿಸುತ್ತದೆ. ಮೆಹರೂನ್ ಮೊಲೆ ಹಾಲು ಕುಡಿವ ತನ್ನ ಎಳೆಗೂಸನ್ನು ಮಾತ್ರ ಎತ್ತಿಕೊಂಡು ತನ್ನ ಗಂಡನ ಮನೆಯಿಂದ ತವರು ಮನೆಗೆ ಬಂದಿದ್ದಾಳೆ. ಮನೆಗೆ ಬಂದರೆ ತಂದೆ, ತಾಯಿ, ಅಣ್ಣ-ತಮ್ಮಂದಿರು ಯಾರೂ ಅವಳನ್ನು ಮಾತನಾಡಿಸುವುದಿಲ್ಲ. ಗಂಡ ಇನಾಯತ್ ಎಲ್ಲಿ ಎಂದರೆ ಅವನು ಒಬ್ಬಳು ನರ್ಸ್ ಹಿಂದೆ ಹೋಗಿದ್ದಾನೆ. ಮನೆಗೆ ಬಾರದೆ ಎಂಟು ದಿನವಾಯಿತು. ಅವಳೊಡನೆ ಬೇರೆ ಮನೆಯಲ್ಲಿದ್ದಾನೆ. ತಾನಿನ್ನು ಅಲ್ಲಿಗೆ ಹಿಂತಿರುಗುವುದಿಲ್ಲ ಎಂದರೂ ಅಣ್ಣಂದಿರು ಕೇಳುವುದಿಲ್ಲ. "ನಿನಗೆ ಅವನು ತಲಾಕ್ ಕೊಟ್ಟರೆ ಇಲ್ಲಿ ಉಳಿದ ನನ್ನ ತಂಗಿಯರಿಗೆ ಮದುವೆಯಾಗುತ್ತದೆಯೇ?" ಎನ್ನುತ್ತಾರೆ. ತಕ್ಷಣ ಒಂದು ಟ್ಯಾಕ್ಸಿ ಮಾಡಿ ಅವಳನ್ನು ಚಿಕ್ಕಮಗಳೂರಿನ ಅವಳ ಗಂಡನ ಮನೆಗೆ ಎಳೆದೊಯ್ಯುತ್ತಾರೆ. ಗಂಡ ಅಬ್ಬರಿಸಿ ಅವಳ ಕೈಯಲ್ಲೇ ಅಣ್ಣಂದಿರಿಗೆ ಭರ್ಜರಿ ಭೋಜನ ಮಾಡಿಸುತ್ತಾನೆ. ಅಣ್ಣಂದಿರು ಮರು ಮಾತಿಲ್ಲದೆ ಹೊರಟು ಹೋದೊಡನೆ ಅವನು ನರ್ಸಿನ ಬಳಿಗೆ ಹೋಗುತ್ತಾನೆ.

ತನ್ನ ವಂಶದ ಕುಡಿಯನ್ನು ಹೆತ್ತು ಹಾಲುಣಿಸಿ ಜೋತುಬಿದ್ದ ಹೆಂಡತಿಯ ಮೊಲೆಗಳನ್ನು ಲೇವಡಿ ಮಾಡುತ್ತಾನೆ. 'ನೀನು ನನ್ನ ತಾಯಿಯ ಹಾಗಿದ್ದಿ' ಎಂದು ಅವಮಾನ ಮಾಡುತ್ತಾನೆ. ಇವೆಲ್ಲವುಗಳನ್ನು ಸಹಿಸದ ಮೆಹರೂನ್ ಮನೆಯಲ್ಲಿ ಗಂಡನಿಲ್ಲದ ಆ ರಾತ್ರಿ ತನ್ನ ಮೈಮೇಲೆ ತಾನೇ ಸೀಮೆ ಎಣ್ಣೆ ಸುರಿದು ಬೆಂಕಿ ಹಚ್ಚಿಕೊಳ್ಳಲು ಹೋಗುವಾಗ ಎಚ್ಚರಗೊಂಡ ಹಿರಿ ಮಗಳು ಅವಳನ್ನು "ನೀನು ನಮಗೆ ಬೇಕು. ಅಪ್ಪನಿಗಾಗಿ ನೀನು ಸಾಯಬಲ್ಲೆಯಾದರೆ ನಮಗಾಗಿ ಬದುಕಲಾರೆಯಾ?" ಎನ್ನುತ್ತಾಳೆ. ಹೊಟ್ಟೆಯಲ್ಲಿ ಹುಟ್ಟಿದ ಮಗಳ ಸ್ಪರ್ಶದಿಂದ ಅವಳ ತಾಯ್ತನ ಎಚ್ಚರಗೊಳ್ಳುತ್ತದೆ. ಮಗಳ ಮಾತಿಗೆ ಬೆಲೆ ಕೊಟ್ಟು ಆತ್ಮಹತ್ಯೆಯ ವಿಚಾರದಿಂದ ವಿಮುಖಳಾಗುತ್ತಾಳೆ. ಇಂತಹ ಅನಿಷ್ಟ ಪದ್ಧತಿ ವಿರುದ್ಧವಾಗಿ ಹೆಣ್ಣು ಬದುಕಬೇಕು, ದಿಟ್ಟತನದಿಂದ ಶೋಷಣೆಯ ವಿರುದ್ಧ ಹೋರಾಟ ಮಾಡಬೇಕು ಎಂಬುದನ್ನು ಇಲ್ಲಿ ಕಾಣಲಾಗುತ್ತದೆ. ಇಲ್ಲಿ ಅಲಕ್ಷಿತ ಹೆಣ್ಣು, ಸಮಾಜದಿಂದ ತುಳಿತಕ್ಕೆ

ಒಳಗಾದ ಹೆಣ್ಣಾಗಿ ಅನಾವರಣಗೊಳ್ಳುತ್ತಾಳೆ.

'ಎದೆಯ ಹಣತೆ'ಯ ಅಶ್ರಫ್‌ರ ಕತೆ ತೀರ ಭಿನ್ನವಾಗಿದೆ. ಬಹು ಪತ್ನಿತ್ವ ಪದ್ಧತಿಗೆ ನಲುಗಿದ ಹೆಣ್ಣು ಮಗಳು ಜೀವ ಕಳೆದುಕೊಳ್ಳುವ ಸಂದರ್ಭದಲ್ಲಿ ಹಿರಿ ಮಗಳ ಮಾತು, ಕಿರಿ ಮಗುವಿನ ಆರ್ತನಾದ ಅವಳ ಆತ್ಮಹತ್ಯೆಯ ಮನಸ್ಸಿನಿಂದ ಹೊರತರುತ್ತದೆ. ಮಗಳೇ ತಾಯಿಯನ್ನು ಸಾವಿನ ದವಡೆಯಿಂದ ಪಾರು ಮಾಡಿ ತಾಯಿಯ ಹೃದಯದಲ್ಲಿ ವಿಶ್ವಾಸದ ಧೈರ್ಯದ ಹಣತೆಯನ್ನು ಹಚ್ಚುತ್ತಾಳೆ. ಸಾವಿನ ಹೊಸ್ತಿಲು ದಾಟಿ ಬಂದ ತಾಯಿಗೆ ಮಗಳು ನೀಡಿದ ತಿಳುವಳಿಕೆ ಮಾತು ಬದುಕಿನ ಸವಾಲುಗಳನ್ನು ಎದುರಿಸುವ ಶಕ್ತಿ ತುಂಬುತ್ತವೆ. ಬಾನು ಅವರ ಸಂಕಲನದ ಎಲ್ಲಾ ಕಥೆಗಳು ಮುಸ್ಲಿಂ ಲೋಕದ, ಅದರಲ್ಲೂ ಹೆಣ್ಣುಮಕ್ಕಳ ಆತಂಕವನ್ನೂ, ಸಂಕಷ್ಟಗಳನ್ನೂ, ಅಕ್ಷರದ ಕನಸಿನಿಂದ ತೊಡಗಿ ಆ ಹೆಣ್ಣುಮಕ್ಕಳ ಎಲ್ಲಾ ಕನಸುಗಳೂ ನುಚ್ಚುನೂರಾಗಿ ಅವರು ಸಾಮಾಜಿಕ, ಧಾರ್ಮಿಕ, ಸಾಂಸಾರಿಕ ವ್ಯವಸ್ಥೆಯೊಳಗೆ ಶೋಷಣೆಗೆ ಒಳಗಾಗುವುದನ್ನು ತೋರಿಸುತ್ತದೆ.

ಆದರೆ ಈ ಕತೆಗಳ ಎಲ್ಲಾ ಹೆಣ್ಣುಮಕ್ಕಳೂ ಕೇವಲ ಮುಸ್ಲಿಂ ಲೋಕದ ಪ್ರತಿನಿಧಿಗಳಾಗದೆ ನಮ್ಮ ಸಮಾಜದ ಹೆಣ್ಣಿನ ಸಂವೇದನೆಯ ಸಂಕೇತಗಳಾಗುತ್ತಾರೆ. ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯದ ಹಿನ್ನೆಲೆಯಿಂದ ಬಂದ ಒಬ್ಬ ಮಹಿಳೆ ತನ್ನದೇ ಧರ್ಮದ ಹೆಸರಿನಲ್ಲಿ ನಡೆಯುವ ಆಚರಣೆಗಳಲ್ಲಿ ಹೆಣ್ಣು ಪಡುವ ನೋವನ್ನು ಬಿಚ್ಚಿಡುವ ದಿಟ್ಟತನ ಮೆರೆದಿದ್ದಾರೆ. ಅದನ್ನು ಎಲ್ಲರೂ ಮೆಚ್ಚಲೇಬೇಕು. ಅದನ್ನು ಹೇಳುವ ಸಾಹಿತ್ಯಕ ಶಕ್ತಿ ಅವರಲ್ಲಿದೆ. ಬಾನು ಮುಷ್ತಾಕ್ ಇನ್ನೊಂದು ಕತೆಯಲ್ಲಿ ದೇವರಿಗೆ ಸವಾಲು ಒಡ್ಡುತ್ತಾರೆ. "ಗಂಡು-ಹೆಣ್ಣು ಸೃಷ್ಟಿ ಮಾಡುವ ನೀನು ಮೂರ್ಖನಂತೆ ಹೆಣ್ಣು ಜೀವಿಗಳನ್ನು ಸೃಷ್ಟಿಸದೇ ನೀನೇ ಒಮ್ಮೆ ಹೆಣ್ಣಾಗಿ ನೋಡು, ಹೆಣ್ಣಾಗಿ ಹುಟ್ಟಿದ್ದಕ್ಕಾಗಿ ಆಕೆ ಎಷ್ಟೆಲ್ಲಾ ಕ್ರೌರ್ಯವನ್ನು ಅನುಭವಿಸುತ್ತಾಳೆ. ನೀನು ಇನ್ನೊಮ್ಮೆ ಪ್ರಪಂಚ ನಿರ್ಮಿಸುವುದಾದಲ್ಲಿ ಗಂಡು, ಹೆಣ್ಣು ಸೃಷ್ಟಿಸುವುದಾದಲ್ಲಿ ಅನುಭವವಿಲ್ಲದ ಕುಂಬಾರನಾಗಬೇಡ. ಭೂಮಿಗೆ ಒಮ್ಮೆ ಹೆಣ್ಣಾಗು ಪ್ರಭುವೇ? ಒಮ್ಮೆ ಹೆಣ್ಣಾಗು" ಎನ್ನುವ ಮಾತುಗಳು ಅಂತಃಕರಣದ ಸಂವೇದನೆಗೆ ಹಿಡಿದ ಕನ್ನಡಿಯಾಗಿದೆ. ಹೆಣ್ಣು ಬೆಂಕಿಯಂತ ವದಂತಿಗೆ ಮೇಣದಂತೆ ಕರಗುವವಳಲ್ಲ, ಕಲ್ಲಿನಲ್ಲಿ ಕೆತ್ತಿದ ಶಾಸನದಂತೆ ಯುಗ ಯುಗಕ್ಕೂ ಸಾಕ್ಷಿಯಾಗುತ್ತಾಳೆ.

'ಒಮ್ಮೆ ಹೆಣ್ಣಾಗು ಪ್ರಭುವೇ? ಬಾನು ಮುಷ್ತಾಕ್ ಬರೆದ ಅನನ್ಯ ಕಥೆ. "ಮಸೀದಿಗೇಕೆ ಹೆಣ್ಣಿಗೆ ಪ್ರವೇಶವಿಲ್ಲ?" ಎಂದು ಕಥೆಯ ಮೂಲಕ ಪ್ರಶ್ನಿಸುವ ಹೆಣ್ಣು ಸ್ವತಃ ಆತ್ಮಕಥೆಯ ರೂಪದಿಂದ ಬಂದಂತೆ ಕಾಣುತ್ತದೆ. ಹಕ್ಕುಗಳಿಗಾಗಿ ಶ್ರಮಿಸುತ್ತಿದ್ದ "ಮಸೀದಿಗೆ ತೆರಳಿ ಪ್ರಾರ್ಥನೆ ಸಲ್ಲಿಸಲು ಮಹಿಳೆಯರಿಗೂ ಅವಕಾಶ ಕೊಡಬೇಕು. ಕುರಾನ್‌ನಲ್ಲಿ ಮಸೀದಿಗೆ ಮಹಿಳೆಯರ ಪ್ರವೇಶವನ್ನು ನಿರಾಕರಿಸಿಲ್ಲ" ಎಂದು ಹೇಳಿದ ಮಾತ್ರಕ್ಕೆ ಅವರ ಮೇಲೆ ಬಹಿಷ್ಕಾರವನ್ನು ಹೇರಲಾಯಿತು. ಈ ಎರಡು ಕಥೆಗಳಲ್ಲಿ ಹೆಣ್ಣು ಪ್ರತಿರೋಧದ ನಡುವೆ ಅಸಹಾಯಕ ಸ್ಥಿತಿಯನ್ನು ಅನುಭವಿಸುವ ದುರಂತ ಜೀವಿಯಾಗಿ ಪ್ರಶ್ನಿಸುತ್ತಾಳೆ. ಇಂತಹ ಏಕಪಕ್ಷೀಯವಾದ ಫತ್ವಾಗಳನ್ನು ಹೊರಡಿಸುವ ಮೂಲಕ ಅವರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದಮನ ಮಾಡಿದ ಸಂದರ್ಭದಲ್ಲಿಯೂ ಎದೆಗುಂದದೆ ಮುನ್ನಡೆದ ಇತರ ಹೆಣ್ಣುಮಕ್ಕಳಿಗೂ ಇವರ ಕಥೆ ದಾರಿದೀಪವಾಗಿದೆ. ಇವರ ಪ್ರಕಾರ ಹೆಣ್ಣು ಯಾವಾಗಲೂ ಪರಾವಲಂಬಿಯಾಗಿರಬೇಕು, ಅದಕ್ಕಾಗಿ ಮಹಿಳೆಯರನ್ನು ಹೆದರಿಸಿ ಮೂಲೆಗುಂಪು ಮಾಡಲು ಹವಣಿಸುತ್ತಿರುತ್ತಾರೆ ಎಂದು ಹೇಳಿಕೆ ನೀಡಿರುವುದನ್ನು ಗಮನಿಸಬಹುದು. ಅವರ ಕಥೆಗಳು ಕೇವಲ ಮುಸ್ಲಿಂ ಹೆಣ್ಣುಮಕ್ಕಳ ಕತೆ ವ್ಯಥೆಗಳಲ್ಲ. ಅವು ಸಮಾಜದಲ್ಲಿನ ತುಳಿತಕ್ಕೊಳಗಾದ ಎಲ್ಲಾ ಹೆಣ್ಣುಮಕ್ಕಳ ಧ್ವನಿಯಾಗಿದೆ.

'ಬೆಂಕಿಮಳೆ' ಕಥೆಯಲ್ಲಿ ಬರುವ ಸಹೋದರಿ ತನ್ನ ಪಾಲಿನ ತವರುಮನೆ ಆಸ್ತಿಗಾಗಿ ನಡೆಸುವ ಹೋರಾಟದ ಕಥನವಾಗಿದೆ. ಮುಸ್ಲಿಂ ಸಮುದಾಯದಲ್ಲಿ ಹೆಣ್ಣುಮಕ್ಕಳು ಮದುವೆಯಾಗಿ ಹೋದರೆ ಮುಗಿಯಿತು. ತಂದೆ ತಾಯಿಯ ಆಸ್ತಿಯಲ್ಲಿ ಅವರಿಗೆ ಯಾವುದೇ ಹಕ್ಕು ಇರುವುದಿಲ್ಲ. ಇದನ್ನು ಪ್ರಶ್ನಿಸಿ ನಡೆಸಿದ ಹೋರಾಟಕ್ಕೆ ಸಿಕ್ಕ ಪ್ರತಿಫಲವೇ ಕೋಪ, ತಾಪ, ನೋವು, 'ಬೆಂಕಿಮಳೆ' ಕಥೆಯ ವಸ್ತುವಾಗಿದೆ. ಹೆಣ್ಣು ತನ್ನ ಹಕ್ಕಿಗಾಗಿ ಹೋರಾಡಿದರೆ ಕುಟುಂಬದ ಒಳಗಿನಿಂದಲೇ ಬೆಂಕಿ ಮಳೆ ಪ್ರಾರಂಭವಾಗುವ ಕಥನ ಇದಾಗಿದೆ.

ಪಾಶ್ಚಾತ್ಯ ಸ್ತ್ರೀವಾದಿ ಚಿಂತಕಿ ವರ್ಜಿನಿಯಾ ವುಲ್ಫ್ ಹೇಳುವಂತೆ ಸಮಾಜದ ಪ್ರಥಮ ಲಿಂಗಿ ಪುರುಷ, ಸಮಾಜದ ಆಗು ಹೋಗುಗಳ ಬಗ್ಗೆ ಮೇಲ್ಪಂಕ್ತಿಯಲ್ಲಿ ಆಲೋಚಿಸುವ, ತಿದ್ದುವ, ಹೊಸ ಕಾನೂನು ಮಾಡುವ ಹಕ್ಕನ್ನು ಪುರುಷನಿಗೆ ಕೊಟ್ಟವರು ಯಾರು? ಎಲ್ಲಾ ಧರ್ಮದಲ್ಲಿಯೂ ಹೀಗೆ ಪುರುಷ ಪ್ರಾಬಲ್ಯವಿದೆ. ಒಳ್ಳೆಯದು ಕೆಟ್ಟದ್ದು ಎಂದು ನಿರ್ಧರಿಸುವ ಹಾಗೂ ಸಮಾನಾಗಿ ಜೀವಿಸುವ ಹಕ್ಕು ಹೆಣ್ಣಿಗೂ ಇದೆ. ಈ ದೃಷ್ಟಿಯಿಂದ ಬಾನು ಮುಷ್ತಾಕ್ ಅವರ ಎಲ್ಲಾ ಕಥೆಗಳ ಅಂತರ್ಗತ ಧ್ವನಿ ಇಂತಹುದನ್ನೇ ಪ್ರಶ್ನಿಸುವ ಪ್ರತಿಮಾತ್ಮಕತೆಗಳಾಗಿ ಮೂಡಿಬಂದಿವೆ. ಪ್ರಶ್ನೆಗಳನ್ನು ಕೇಳುವ ಬಗೆ ಒಂದಾದರೆ, ಸಾತ್ವಿಕ ಬಂಡಾಯದ ಧ್ವನಿ ಮೂಲಕವಾಗಿ ಸಮಾಜದ ಅನಿಷ್ಟ ಪದ್ಧತಿಗಳನ್ನು ವಿರೋಧಿಸುವ ಅವರ ಕಥೆಗಳು ಕೆಡಕುಗಳನ್ನು ಕಾಣಿಸುವಂತೆ ಹೆಣೆದ ಕತೆಗಳಾಗಿವೆ.

ಸಮುದಾಯವನ್ನು ವಿರೋಧಿಸುವ ನೆಲೆಗಿಂತ ಪ್ರಶ್ನಿಸುವ ಕಲೆ ಭಿನ್ನವಾದ ಹೆಣ್ಣಿನ ಸಂವೇದನೆ ಕಂಡುಬರುತ್ತದೆ. ಕೆಡಕುಗಳನ್ನು ಕಟ್ಟಿಕೊಡುವ ಬಗೆ ವಿಭಿನ್ನವಾಗಿದೆ. ಹಾಗೆಯೇ ಗಂಡಾಳ್ವಿಕೆಯ ದೌರ್ಜನ್ಯವನ್ನು "ನಾನು ಗಟ್ಟಿಯಾಗಿ ವಿರೋಧಿಸುತ್ತೇನೆ" ಎಂದು ಹೇಳುವ ಶಾಬ್ದಿಕ ಪದಗಳು ಕೇವಲ ಪದಗಳಾಗದೇ ಅಂತರ್ಗತ ದನಿಯಾಗಿದೆ. ಧರ್ಮದ ಅಫೀಮು ಎಷ್ಟು ಕೆಟ್ಟದಾಗಿ ಸಮಾಜದ ಸ್ವಾಸ್ಥ್ಯ ಹಾಳು ಮಾಡುತ್ತದೆ ಎಂಬುದನ್ನು ಬಾನು ಮುಷ್ತಾಕ್ ಅವರ ಕತೆಗಳು ಸಮರ್ಥವಾಗಿ ಪ್ರತಿನಿಧಿಸುತ್ತವೆ. ಈ ಸಮುದಾಯದ ಹೆಣ್ಣುಮಕ್ಕಳು ತಮ್ಮ ಕೌಟುಂಬಿಕ ವಲಯ ರೂಪಿಸಿದ ಚೌಕಟ್ಟಿನಲ್ಲಿಯೇ ಬದುಕಬೇಕು ಎನ್ನುವ ಜನಾಂಗ ಸೃಷ್ಟಿಸಿದ ತೊಡಕುಗಳನ್ನು ಬಿಚ್ಚಿಟ್ಟಿದ್ದಾರೆ. ಸಮುದಾಯದ ಆಂತರಿಕ ಒಳಬಿಕ್ಕಟ್ಟುಗಳು ಹೆಣ್ಣಿನ ಒಳಬಿಕ್ಕಟ್ಟುಗಳಾಗಿಯೂ ಕಾಣಬಹುದು.

'ಬೆಂಕಿಮಳೆ' ಅತ್ಯಂತ ಮಾರ್ಮಿಕವಾದ ಆರ್ದ್ರತೆಯಿಂದ ಕೂಡಿದ ಪ್ರಸಿದ್ಧ ಕತೆಯಾಗಿದೆ. ಇಲ್ಲಿ ಬರುವ ಪಾತ್ರಗಳ ಹೋರಾಟದ ಮಾದರಿ ತೀರ ಭಿನ್ನವಾಗಿದೆ. ಶತಶತಮಾನದ ಹೆಣ್ಣಿನ ಕಥನ ಕಂಡಾಗ ನಿರಂಜನರ 'ಮಾಧವಿ' ಕಾದಂಬರಿಯಲ್ಲಿ ಮಾಧವಿಯ ಜೀವನ ನಲುಗಿದ ಕಥನ ನಿಜಕ್ಕೂ ಹೃದಯವಿದ್ರಾವಕವಾದುದು. ನೋವುಗಳನ್ನು ನುಂಗಿ ಬದುಕುವ ಜೀವಂತ ಪಾತ್ರಗಳು ವ್ಯವಸ್ಥೆಯನ್ನು ಪ್ರಶ್ನಿಸುವ ಪಾತ್ರಗಳು ಮಳೆ ಬೆಂಕಿಯಾಗಿ ಸುರಿಯುತ್ತದೆ. ಸಮಕಾಲೀನ ಸಾಮಾಜಿಕ ಸಂಘರ್ಷದ ನೆಲೆಗಳನ್ನು ಅರಿಯುವ ಸಮಕಾಲೀನ ಪ್ರಜ್ಞೆ, ತಿಳುವಳಿಕೆಯ ಹೆಣ್ಣುಗಳು ಇವರ ಕಥೆಗಳಲ್ಲಿ ಕಾಣುತ್ತಾರೆ. ಸಾಹಿತ್ಯವೆಂದರೆ ಜನಜೀವನದ ಪ್ರತಿಬಿಂಬ. ಸಾಹಿತ್ಯದ ವರ್ಣರಂಜಿತ ಚಿತ್ರಣ ಬೇರೆ ಸತ್ಯ, ಸಾಹಿತ್ಯ ದಮನಿತರ ಧ್ವನಿಯಾಗಿ ನಿಲ್ಲಬೇಕು. ಹೊಸನೋಟದಿಂದ ಕೂಡಿದ ಸಂವೇದನಾಶೀಲ ಬರವಣಿಗೆ ಮುಖ್ಯ. ಈ ನಿಟ್ಟಿನಲ್ಲಿ ಬಾನು ಮುಷ್ತಾಕ್ ಅವರ ಕಥೆಗಳು ಮುಸ್ಲಿಂ ಧರ್ಮದಲ್ಲಿರುವ ಅಂಧಾನುಕರಣೆ, ಹೇರಿಕೆ, ಅಮಾನವೀಯ ನಡೆ, ಸಾಮಾಜಿಕ ವೈರುಧ್ಯಗಳು ಸಕಾಲಿಕವಾಗಿವೆ. ಸಾಮಾಜಿಕ ಬದಲಾವಣೆಯ ಅಂತರ್ಗತ ಕಾಳಜಿ ಅಲ್ಲದೆ ಮತ್ತೇನೂ ಅಲ್ಲ ಎಂಬುದು ಸಾಬೀತು ಪಡಿಸಿದಂತಾಗಿದೆ.

ಇವರ ಕಥೆಗಳಲ್ಲಿ ಮುಸ್ಲಿಂ ಸಮುದಾಯದ ಹೆಣ್ಣುಮಕ್ಕಳು ಧರ್ಮಾಂಧತೆ, ದೈನಂದಿನ ಪರೀಕ್ಷೆಗಳು, ಪಿತೃಪ್ರಭುತ್ವದ ದಬ್ಬಾಳಿಕೆ, ಲಿಂಗ ಅಸಮಾನತೆ, ಪುರುಷ ಪ್ರಾಬಲ್ಯ, ವರ್ಗ, ವರ್ಣ, ಲಿಂಗ ರಾಜಕಾರಣಗಳಿಂದ ನಲುಗಿದ ಹೆಣ್ಣುಮಕ್ಕಳ ಜೀವನದ ಕಥೆಯಾಗಿದೆ. ಈ ಕಥೆಗಳು 'ಮಾನವಪರ ಧ್ವನಿ' ಎಂದು ಭಾವಿಸಬೇಕಿದೆ. ಧರ್ಮದ ಹೆಸರಿನಲ್ಲಿ ಕೆಸರು ಎರಚಿ ವಿಕೃತ ಆನಂದ ಪಡುವ ಪ್ರವೃತ್ತಿಯ ಮಧ್ಯೆ ಬಾನು ಮುಷ್ತಾಕ್ ಅವರು ತಮ್ಮ ಸೃಜನಶೀಲ ಅಭಿವ್ಯಕ್ತಿಯ ಜೊತೆ ತಮ್ಮ ಕಥೆಗಳ ಮೂಲಕ ಇಂತಹ ವಿಕೃತಿಗಳ ವಿರುದ್ಧ ದನಿ ಎತ್ತುತ್ತಿರುವುದು ಅವರ ಸಾಹಿತ್ಯಕ್ಕೆ ವಿಶೇಷ ಶಕ್ತಿಯನ್ನು ಕೊಟ್ಟಿದೆ.

ಹೀಗಾಗಿ ಬಾನು ಮುಷ್ತಾಕ್ ಅವರು ಬರೆದುದು ಸ್ತ್ರೀ ಕುರಿತಾಗಿ ಅಲ್ಲ, ಅದು ಹೆಣ್ಣಿನ ಕುರಿತಾಗಿ ಎನ್ನುವುದು ಬಹಳ ಸ್ಪಷ್ಟವಾಗಿ ಕಾಣುತ್ತಿದೆ. ಮುಸ್ಲಿಂ ಸಮುದಾಯದ ಸಾಮಾಜಿಕ-ಧಾರ್ಮಿಕ ಕಟ್ಟುಪಾಡಿಗೆ ಒಳಗಾಗಿ ನಲುಗಿದ ಹೆಣ್ಣುಮಕ್ಕಳ ಜೀವನದ ಹೃದಯವಿದ್ರಾವಕ ಕಥೆಗಳಾಗಿವೆ. ಪ್ರತಿ ಕಥೆಗಳು ವಿಭಿನ್ನವಾದ ವಿಷಯ ವಸ್ತು ಒಳಗೊಂಡಿವೆ. 'ಹಸೀನಾ' ಕಥೆಯಲ್ಲಿ ಕಥಾನಾಯಕಿ ಕೌಟುಂಬಿಕ ಸಂಘರ್ಷದ ನಡುವೆ ತನ್ನ ಬದುಕನ್ನು ಕಟ್ಟಿಕೊಳ್ಳಲು ಹೆಣಗಾಡುವ ಕಥನ ಅತ್ಯಂತ ಮಾರ್ಮಿಕವಾಗಿದೆ. ಮುಸ್ಲಿಂ ಸಮುದಾಯದ ಹಾಗೂ ಬಡ ವರ್ಗದ ಹೆಣ್ಣುಮಕ್ಕಳ ಜೀವನದ ಹೋರಾಟದ ಹಾದಿಗಳನ್ನು ಬಾನು ಮುಷ್ತಾಕ್ ಅವರ ಕಥೆಗಳು ಸಮರ್ಥವಾಗಿ ಕಟ್ಟಿಕೊಟ್ಟಿವೆ. ಸಮಾಜದಲ್ಲಿರುವ ಕೆಡುಕುಗಳನ್ನು ಮಹಿಳೆ ಸಂಯಮದಿಂದ ಗೆದ್ದು ಬರುತ್ತಾಳೆ. ಈ ಸಂಯಮ ಎಲ್ಲಿಯವರೆಗೆ ಎಂದು ಪ್ರಶ್ನಿಸುವ ಬಾನು ಮುಷ್ತಾಕ್ ಅವರ ಬದುಕೇ ಉರಿಯುವ ಬೆಂಕಿ ಇದ್ದ ಹಾಗೆ.

'ಒಮ್ಮೆ ಹೆಣ್ಣಾಗು ಪ್ರಭುವೆ' ಕಥೆಯಲ್ಲಿ ಅಂತಃಕರಣವಿರುವ ದೇವರು ಸಹ ಗಂಡಾಳ್ವಿಕೆಯನ್ನು ಎತ್ತಿಹಿಡಿಯುವುದಾದರೆ, ಅವನು ದೇವರು ಹೇಗಾಗಲು ಸಾಧ್ಯ? ಹೆಣ್ಣನ್ನು ಮನುಷ್ಯಳಾಗಿ ಒಪ್ಪಿಕೊಳ್ಳುವ ಶಕ್ತಿ ಇರುವ ದೇವರನ್ನು ಒಪ್ಪಿಕೊಳ್ಳಬಹುದು. ಇಂತಹ ಶಕ್ತಿಯನ್ನು ಅಂತಿಮ ಶಕ್ತಿಯೆಂದು ಒಪ್ಪಿಕೊಳ್ಳಬಹುದು. ಹೆಣ್ಣಿನ ಸಂವೇದನೆಯನ್ನು ಬೆಳೆಸಿಕೊಳ್ಳಲು ದೈವವಾದರೂ ಪ್ರೇರೇಪಿಸಲಿ ಎಂಬ ಭಾವವನ್ನು ವ್ಯಕ್ತಪಡಿಸಿದ್ದಾರೆ. 'ದೇವರು ಮತ್ತು ಅಪಘಾತ' ಕಥೆಯಲ್ಲಿ ಹಸಿವಿನ ಕನ್ನಡಿಯಲ್ಲಿ ದೇವರನ್ನು ಪ್ರಶ್ನಿಸುತ್ತಾರೆ. ಈ ಕತೆಯಲ್ಲಿ ಹೆಣವನ್ನು ಶುಚಿಗೊಳಿಸುವ ಕೆಲಸ ಮಾಡುವ ಆ ಹೆಣ್ಣು, "ಈ ಹಳ್ಳಿಯಲ್ಲಿ ಒಂದೂ ಸಾವಾಗಿಲ್ಲ, ಹೀಗಿರುವಾಗ ನಾವು ಬದುಕುವುದಾದರೂ ಹೇಗೆ?" ಎಂದು ದೇವರನ್ನು ಪ್ರಶ್ನಿಸುತ್ತಾರೆ.

ಸಾವಿನ ಮೂಲಕವೇ ಬದುಕನ್ನು ಕಟ್ಟಿಕೊಳ್ಳಬೇಕಾದ ಅನಿವಾರ್ಯತೆಯನ್ನು ಕತೆಯಲ್ಲಿ ತೋರಿಸಲಾಗಿದೆ. ಕಥೆಯಲ್ಲಿ, ಅಪಘಾತದಲ್ಲಿ ಮೂವರು ಹೆಣ್ಣುಮಕ್ಕಳು ಸಾವಿಗೀಡಾದಾಗ, ಆ ತಾಯಿಯಲ್ಲಿ ಸಂತೋಷ ಕಾಣುತ್ತದೆ. ಸಾವು ಕಂಡಾಗ ಇಸ್ಲಾಂನಲ್ಲಿ ಹೇಳುವ ಉದ್ಧಾರವೂ ಕೂಡ ತನಗೆ ಮರೆತುಹೋಗಿ, ಇಂದು ತನ್ನ ಮನೆಯಲ್ಲಿ ಎಲ್ಲರೂ ಹೊಟ್ಟೆತುಂಬ ಉಣ್ಣಬಹುದು ಎಂಬ ಭಾವ ವ್ಯಕ್ತವಾಗಿದೆ. ಸಾವಿನ ಮನೆಯಲ್ಲಿ ತಾನು ಅನ್ನ ತಿನ್ನುವಾಗ ಮನೆಯಲ್ಲಿ ಹಸಿದ ಬಾಣಂತಿ ಮಗುವಿನ ಜ್ಞಾಪಕವಾಗಿ, ತಾನು ಆಹಾರ ಸೇವಿಸಲೋ ಬೇಡವೋ ಎಂಬ ಬಗ್ಗೆ ತಾಯಿಯಲ್ಲಿ ಗೊಂದಲ ಶುರುವಾಗುತ್ತದೆ. 'ಕೊನೆಗೂ ಕರುಳಿನ ಕೂಗು ಗೆದ್ದಿತು' ಎಂದು ಹಸಿವಿನ ಕೂಗು ಗೆದ್ದಿರುವ ಬಗ್ಗೆ ಲೇಖಕಿ ಪ್ರಸ್ತಾಪಿಸಿದ್ದಾರೆ. "ಎಲ್ಲರ ಆಶ್ರಯದಾತ" ಎಂದು ಕರೆಯಲ್ಪಡುವ ದೇವರು ತಮಗೆ ಮಾತ್ರ ಅನ್ನವನ್ನು ನೀಡುತ್ತಿಲ್ಲವಲ್ಲ ಎಂಬ ಪ್ರಶ್ನೆಯನ್ನು ತಾಯಿ ಕೇಳುತ್ತಾಳೆ. 'ಇದ್ದತ್' ಕತೆಯಲ್ಲಿ ವಿಧವೆಯೊಬ್ಬಳು ಇಸ್ಲಾಂ ಧರ್ಮದಂತೆ 45 ದಿನಗಳ ಧರ್ಮಾಚರಣೆಯ ಸಂದರ್ಭದಲ್ಲಿನ ಅವಳ ಬದುಕು

ಹಿಂಸಾತ್ಮಕವಾಗಿರುವ ಬಗೆ ಹಾಗೂ ತನಗೆ ಮುಂದೆ ಉತ್ತಮ ಬದುಕು ಸಿಗಬಹುದೇ ಎಂಬ ಆಸೆಯೂ ಚಿಗುರೊಡೆದ ಭಾವವನ್ನು ವ್ಯಕ್ತಪಡಿಸಿದ್ದಾರೆ. ಅವರ ಕತೆಗಳು ಲೋಕದ ಜೊತೆಗೆ ನಡೆಸುವ ಮಾತುಗಳಾಗಿವೆ.

ನಮ್ಮೊಳಗಿನ ಬೇಗುದಿಗಳಿಗೆ ಇವರ ಕಥೆಗಳು ಉತ್ತರವನ್ನು ಕಾಣಿಸುತ್ತವೆ. ಒಟ್ಟಾರೆ ಇವರ ಕಥೆಗಳು ಮಾಯಲಾರದ ಗಾಯದ ಕಥೆಗಳಾಗಿವೆ. ಮಾಗಿದ ಮನಸ್ಸುಗಳ ಹೆಣ್ಣಿನ ಒಡಲ ಉರಿಯ ಕಥನಗಳಿವು. ಈ ಹಿನ್ನೆಲೆಯಲ್ಲಿ ಸಾಮಾಜಿಕ ಒತ್ತಡಗಳಿಗೆ ಒಳಗಾಗುತ್ತಿರುವ ಲೋಕದ ಎಲ್ಲ ಹೆಣ್ಣುಮಕ್ಕಳು ಅನುಭವಿಸುತ್ತಿರುವ ಸ್ತ್ರೀ ಶೋಷಣೆಯ ಹಲವು ಮುಖಗಳ ಅನಾವರಣ ಮಾಡುತ್ತಾರೆ.

**ಪರಾಮರ್ಶನ ಗ್ರಂಥಗಳು:**

1. ಬಾನು ಮುಷ್ತಾಕ್, (2025), ಹಸೀನಾ ಮತ್ತು ಇತರ ಕಥೆಗಳು, ಮೈಸೂರು: ಅಭಿರುಚಿ ಪ್ರಕಾಶನ.
2. ಅನುಪಮಾ ಎಚ್.ಎಸ್., (2023), ಗಡಿದಾಟಿದ ಹೆಣ್ಣುಗಳ ಕಥನ, ಗದಗ: ಲಡಾಯಿ ಪ್ರಕಾಶನ.
3. ಬೆಲ್ ಹುಕ್ಸ್ (ಮೂಲ), ಶ್ರೀಮತಿ ಎಚ್.ಎಸ್. (ಅನು), (2020), ಸ್ತ್ರೀವಾದ, ಸುರತ್ಕಲ್: ಸಂಗಾತ ಪುಸ್ತಕ.
4. ಸಿಮೋನ್ ದ ಬೋವಾ (ಮೂಲ), ಶ್ರೀಮತಿ ಎಚ್.ಎಸ್. (ಅನು), (2017), ದ ಸೆಕೆಂಡ್ ಸೆಕ್ಸ್ (ಸಂಪುಟ 1–4), ಮಂಡ್ಯ: ಸಂಕಥನ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.